ಬಹುತೇಕರು ಸೃಷ್ಟಿಸುವ ಸಾಹಿತ್ಯ ಅವರ ಕ್ಯಾಂಪಸ್‌ಗಳನ್ನು ಬಿಟ್ಟು ಹೊರಬರುವುದೇ ಇಲ್ಲ. ಈ ಅಧ್ಯಾಪಕರು, ಪ್ರೊಫೆಸರ್‌ಗಳು ಅವರು ಕೃತಿಗಳ ಬಗ್ಗೆ ಇವರು ಬರೆಯುವುದು, ಇವರ ಕೃತಿಗಳ ಬಗ್ಗೆ ಅವರು ಬರೆಯುವುದು... ಹೀಗೆ ಪರಸ್ಪರ 'ವಿಮರ್ಶಾ ಪೋಷಕ'ರಾಗಿ ಕೆಲಸ ಮಾಡಿಕೊಂಡಿರುತ್ತಾರೆ. ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ಎನ್ನುವುದು ಅಧ್ಯಾಪಕರಿಂದ, ಅಧ್ಯಾಪಕರಿಗೋಸ್ಕರ ಹಾಗೂ ಅಧ್ಯಾಪಕರಿಗಾಗಿ ಎನ್ನುವಂತಾಗಿದೆ. ನಾನು ಒಬ್ಬ ಲೇಖಕನಾಗಿ ವಿಮರ್ಶೆಯನ್ನು ಹಾಗೂ ವಿಮರ್ಶಕರನ್ನು ತಿರಸ್ಕರಿಸಿದ್ದೇನೆ. ನನ್ನ ನಿಜವಾದ ಹಾಗೂ ಅಂತಿಮ ವಿಮರ್ಶಕರು ಓದುಗರು ಮಾತ್ರ.

**◆ ನೀವು ಕಳೆದ ಮೂರು ದಶಕಗಳಿಂದ ನಿರಂತರವಾಗಿ ಕಥೆಗಳನ್ನು ಬರೆಯುತ್ತ ಬಂದಿದ್ದೀರಿ. ಆ ಕಾರಣಕ್ಕೆ ನಿಮ್ಮ ಅಭಿಮಾನಿ ಬಳಗ ಕೂಡ ದೊಡ್ಡದಿದೆ. ಅವರ ಪೈಕಿ ಹೆಚ್ಚಿನವರು ಹೆಣ್ಣುಮಕ್ಕಳು ಎನ್ನುವುದು ವಿಶೇಷವಾದ ಸಂಗತಿ. ಇದಕ್ಕೆ ಕಾರಣವೇನಿರಬಹುದು?**

ಹೆಣ್ಣಿನ ಭಾವಲೋಕ ನನಗೆ ಯಾವತ್ತೂ ಅತ್ಯಂತ ಕುತೂಹಲದ ಹಾಗೂ ಸವಾಲಿನ ವಸ್ತು. ನಾನು ನನ್ನನ್ನು ಹೆಣ್ಣಾಗಿ ಪರಿಭಾವಿಸಿಕೊಂಡು ಅನೇಕ ಕಥೆಗಳನ್ನು ಬರೆದಿದ್ದೇನೆ. ನನ್ನ ಆತ್ಮಕಥನಾತ್ಮಕ ಬರಹಗಳಲ್ಲೂ ಅನೇಕ ಮಹಿಳಾ ಪಾತ್ರಗಳು ಬರುತ್ತವೆ. ನಾನು ನನ್ನ ತಾಯಿ ಸೇರಿದಂತೆ ಅನೇಕ ದುಡಿಯುವ ಮಹಿಳೆಯರ ಬದುಕನ್ನು ತೀರಾ ಹತ್ತಿರದಿಂದ ಗಮನಿಸಿದ್ದೇನೆ. ಭಾರತದ ಆರ್ಥಿಕ ವ್ಯವಸ್ಥೆಯನ್ನು ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದಿರುವುದು ಹೆಣ್ಣು. ಕೃಷಿಗಂತೂ ಹೆಣ್ಣೇ ಆಧಾರ. ಹೆಣ್ಣುಮಕ್ಕಳಿಲ್ಲದೇ ವ್ಯವಸಾಯವೇ ಇಲ್ಲ. ನನ್ನ ತಾಯಿಗೆ ಹನ್ನೆರಡು ಮಕ್ಕಳು, ನಾಲ್ಕು ಮಕ್ಕಳು ಸತ್ತುಹೋದವು. ನನ್ನ ತಾಯಿಗೆ ಹಾಲು ಬರುತ್ತಿರಲಿಲ್ಲ. ನಮ್ಮ ಮನೆಗೆ ರಾಗಿ ಮಾಡಲು ಮತ್ತಿತರ ಕೆಲಸಕ್ಕೆ ಎಂದು ದಲಿತ ಹೆಂಗಸರು ಬರುತ್ತಿದ್ದರು. ಅವರು ನಮಗೆ ಹಾಲು ಕುಡಿಸುತ್ತಿದ್ದರು. ಹಾಗೆ ಬೆಳೆದವನು ನಾನು. ಹೆಣ್ಣಿನ ಬಗ್ಗೆ ನನಗೆ ಅಲ್ಲಿಂದಲೇ ಕುತೂಹಲ ಮೂಡಿತು ಅನ್ನಿಸುತ್ತದೆ. ಅಧಿಕವಾದ ಪ್ರೀತಿ, ಮಾನವೀಯತೆ, ಕರುಣೆ ಇರುವುದು ಹೆಣ್ಣಿನಲ್ಲೇ. ಹೆಣ್ಣು ಮತ್ತು ಭೂಮಿ ನನ್ನನ್ನು ಬಹುವಾಗಿ ಕಾಡಿದ ವಸ್ತುಗಳು.

**◆ ನಿಮ್ಮ ಕಥೆಗಳಿಂದಲೇ ನಿಮಗೆ ಹೆಂಡತಿ ಸಿಕ್ಕಿದ್ದು ಎನ್ನುವುದನ್ನು ಕೇಳಿದ್ದೇನೆ.**

ಹೌದು. ನನ್ನ ಕಥೆಗಳನ್ನು ಓದಿಯೇ ಆಕೆ ನನ್ನನ್ನು ಇಷ್ಟಪಟ್ಟಿದ್ದು. ನಾನು ಎಂ.ಎ. ಮುಗಿಸಿದ ನಂತರ ಒಂದಷ್ಟು ಕಾಲ ಲೆಕ್ಚರರ್ ಆಗಿ ಕೆಲಸ ಮಾಡಿದೆ. ಆಕೆ ಸಾಹಿತ್ಯದ ವಿದ್ಯಾರ್ಥಿ. ಕಥೆ, ಕವನ ಓದುವ ಹವ್ಯಾಸ ಹೊಂದಿದ್ದಳು. ನನ್ನ ಕಥೆಗಳನ್ನು ಓದಿ ಮೆಚ್ಚಿಕೊಂಡಿದ್ದಳು. ಸಾಹಿತ್ಯದ ಮೂಲಕ ಬೆಸೆದುಕೊಂಡ ನಾವು ಪರಸ್ಪರ ಪ್ರೀತಿಸಿ ವಿವಾಹವಾದೆವು. ಮದುವೆಯಾದ ನಂತರ ನನ್ನ ಹೆಂಡತಿ ಚಂದ್ರಕಲಾ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿದಳು. ಪಂಚಮಿ ಎಂಬ ಕಾವ್ಯನಾಮದಲ್ಲಿ ಆಕೆಯ ಕೆಲವು ಕಥೆಗಳೂ ಕೂಡ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆಕೆ ಪ್ರಕಾಶಕಿಯಾಗಿ ಸಿದ್ಧಲಿಂಗಯ್ಯನವರ ಕವನಗಳು ಸೇರಿದಂತೆ ಹಲವು ಕೃತಿಗಳನ್ನು ಪ್ರಕಟಿಸಿದ್ದಾಳೆ.

**◆ ನಿಮ್ಮ ಒಂದೆರಡು ಕಥೆಗಳು ಸಿನಿಮಾಗಳಾಗಿವೆ. ಕೆಲವೊಂದು ಧಾರಾವಾಹಿಗಳಿಗೆ ಚಿತ್ರಕಥೆ, ಸಂಭಾಷಣೆಯನ್ನೂ ನೀವು ಬರೆದಿದ್ದೀರಿ. ನಿವೃತ್ತರಾದ ನಂತರ ಒಂದು ಮಾಸಪತ್ರಿಕೆಯನ್ನು ಹೊರತಂದಿರಿ. ಸಿನಿಮಾ ಹಾಗೂ ಪತ್ರಿಕೋದ್ಯಮದ ಅನುಭವದ ಬಗ್ಗೆ ಹೇಳಿ**

ನಾನು ಹೈಸ್ಕೂಲು ಓದಲೆಂದು ಹಳ್ಳಿಯಿಂದ ಬೆಂಗಳೂರಿಗೆ ಬಂದಾಗ ನನ್ನಲ್ಲಿದ್ದ ಕೀಳರಿಮೆಯನ್ನು ಹೋಗಲಾಡಿಸಿದ್ದೇ ರಾಜಕುಮಾರ್ ಅವರ ಸಿನಿಮಾಗಳು. ಶಾಲೆಯಲ್ಲಿ ನನ್ನನ್ನು ಹಳ್ಳಿ ಗಮಾರ